ಅಧ್ಯಕ್ಷರು : ಯಾವ ಸರಕಾರವೂ ಇದಕ್ಕಿಂತ ಮುಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ಗೃಹಸಚಿವರು ಕೂಡ ಆ ಪೆಟ್ಟು ತಿಂದ ಜನರನ್ನು ಭೇಟಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದುದರಿಂದ ವಿಷಯವನ್ನು ಅಲ್ಲಿಗೆ ಮುಗಿಸಿ...

2) ಬೆಳ್ಳಾವಿಯಲ್ಲಿ ವಿದ್ಯುತ್ ಅಭಾವದಿಂದ ರೈತರು ಕೆ.ಇ.ಬಿ. ಆಫೀಸಿಗೆ ಮುತ್ತಿಗೆ ಹಾಕಿರುವುದು.

1.45 ಪಿ.ಎಂ.

ಶ್ರೀ ಆರ್. ನಾರಾಯಣ್ : ಅಧ್ಯಕ್ಷರೇ, ನನಗೊಂದು ನಿಮಿಷ ಅವಕಾಶ ಕೊಡಿ. ನಮ್ಮ ಕ್ಷೇತ್ರದಲ್ಲಿ ವಿದ್ಯುತ್ ಅಭಾವವಾಗಿರುವ ಬಗ್ಗೆ ಹೇಳಬೇಕಾಗಿದೆ. ತಮ್ಮ ಕ್ಷೇತ್ರಗಳಿಗೆ ನಾವು ಹೋಗುವುದಕ್ಕೆ ಆಗುತ್ತಿಲ್ಲ ಸಾವಿರಾರು ಜನ ರೈತರು ಕೆಇಬಿ ಆಫೀಸ್‌ಗೆ ಮುತ್ತಿಗೆ ಹಾಕಿದ್ದಾರೆ. ಇದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕು. ಹಿಂದೆ ಸರ್ಕಾರಕ್ಕೆ ಎಷ್ಟು ಹೇಳಿಕೊಂಡಿದ್ದರೂ ಏನೂ ಉಪಯೋಗವಾಗಿಲ್ಲ. ಮಳೆ ಕೂಡ ಇಲ್ಲ. ನಾವು ಕ್ಷೇತ್ರಕ್ಕೆ ಹೋಗದಂತಾಗಿದೆ ಆದ್ದರಿಂದ ಸರ್ಕಾರ ಆದೇಶ ಕೊಡಬೇಕಾಗುತ್ತದೆ. ಸಾವಿರಾರು ಜನ ರೈತರು ಮುತ್ತಿಗೆ ಹಾಕಿ ಕುಳಿತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಸುಮ್ಮನಿರಿ, ಯಾರ ಮುಂದೆ ಈ ರೋಧನ, ಕೇಳುವವರು ಯಾರಾದರೂ ಇದ್ದಾರೆಯೇ ?

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ಆ ಕಡೆ ಮುಖ್ಯಮಂತ್ರಿಗಳ ಸುತ್ತ ಕೆಲವು ಘೆರಾವ್ ಮಾಡಿದ್ದಾರೆ ಆದರಿಂದ ಅವರನ್ನು ಮುಕ್ತಗೊಳಿಸಬೇಕು.

ಶ್ರೀ ಆರ್. ನಾರಾಯಣ್ : ತುಮಕೂರು ಜಿಲ್ಲೆಯಲ್ಲಿ ಎರಡು ಮೂರು ದಿವಸಗಳಿಂದ ಕರೆಂಟ್ ಇರಲಿಲ್ಲ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗಿದೆ.

ಶ್ರೀ ಷಫಿ ಅಹಮದ್ : 8 ದಿವಸದಿಂದ ಕರೆಂಟ್ ಇಲ್ಲದೆ ಜನ ಕಂಗೆಟ್ಟುಹೋಗಿದ್ದಾರೆ.

(ಗೊಂದಲ)

ಅಧ್ಯಕ್ಷರು : ಬಾಯಿಗೆ ಬಂದಿದ್ದನ್ನು ಹೇಳುತ್ತೀದ್ದೀರಿ, ಅದಕ್ಕೆ ವಿಧಾನವೇ ಇಲ್ಲವೇ? ನಿಯಮಾವಳಿಗೆ ಮರ್ಯಾದೆ ತೋರಬೇಡವೇ? ದಿಕ್ಕೆಟ್ಟ ರೀತಿಯಲ್ಲಿ ನಡೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಆರ್. ನಾರಾಯಣ್ : ಪರಿಸ್ಥಿತಿ ಹಾಗಿದೆ ಸ್ವಾಮಿ.

ಅಧ್ಯಕ್ಷರು : ಹಾಗಿದ್ದರೆ ಪರಿಸ್ಥಿತಿಯನ್ನು ನಿಮ್ಮ ಕೈಗೆ ತೆಗೆದುಕೊಳ್ಳಿ, ವಿಧಾನಸಭೆ ಏತಕ್ಕೆ ಬೇಕು? You should have shown me the basic courtesy of coming to my Chamber and brought to my notice.

SHRI R. NARAYAN :Certain things we cannot stand formalities.

ಅಧ್ಯಕ್ಷರು : ನಾನು ಏನು ಮಾಡಬೇಕು ಹೇಳಿ?

ಶ್ರೀ ಆರ್. ನಾರಾಯಣ್ : ದಯವಿಟ್ಟು ಸರ್ಕಾರಕ್ಕೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೇಳಿ.

ಶ್ರೀ ಸಿ. ಬೈರೇಗೌಡ : ಶ್ರೀ ನಾರಾಯಣರು ಹೇಳಿದಂತೆ ಬಯಲುಸೀಮೆಯ ಕೋಲಾರ ಚಿತ್ರದುರ್ಗ ತುಮಕೂರು ಕಡೆಗಳಲ್ಲಿ ವಿದ್ಯುತ್ ಪಂಪ್‌ಸೆಟ್ ಉಪಯೋಗಿಸುತ್ತಿರುವವರಿಗೆ ಇರುವ ಸಮಸ್ಯೆ ಇದು. ದಿನದಲ್ಲಿ ಕೇವಲ 3 ರಿಂದ 4 ಗಂಟೆ ಕೂಡ ವ್ಯವಸ್ಥಿತವಾಗಿ ಕರೆಂಟ್ ಸಿಗುತ್ತಿಲ್ಲ. ಬೇರೆ ಕಡೆ ಪ್ರವಾಹವಾಗುತ್ತಿದ್ದರೆ ನಮ್ಮ ಕಡೆ ಮಳೆಯೇ ಇಲ್ಲ. ಇದು ಮುಖ್ಯಮಂತ್ರಿಗಳಿಗೆ ಕೂಡ ಗೊತ್ತಿದೆ. ಇರುವ ನೀರನ್ನಾದರೂ ಬಳಸಿಕೊಂಡು ಬೆಳೆ ಮಾಡೋಣ ಎಂದರೆ ಅದೂ ಸಾಧ್ಯವಾಗುತ್ತಿಲ್ಲ. ಕಣ್ಣಲ್ಲಿ ಎಣ್ಣೆ ಬಿಟ್ಟುಕೊಂಡು ಕಾದರ ಕರೆಂಟ್ ಕನಸಿನಲ್ಲೂ ಸಿಗದಿರುವ ಪರಿಸ್ಥಿತಿ ಉದ್ಭವವಾಗಿದೆ. ಹಿಂದೆಯೆಲ್ಲ ನಾನು ಅನೇಕ ಸಲ ಹೇಳಿದ್ದೆ ಈ ಬಗ್ಗೆ ಒಂದು ಸದನದ ಸಮಿತಿ ಮಾಡಿ ಎಂದು.

ಅಧ್ಯಕ್ಷರು : ಏನು ಬೈರೇಗೌಡರೇ ಒಬ್ಬ ಅನುಭವಿಕ ಸದಸ್ಯರಾಗಿ ಅವರು ಏನೋ ಸಭೆಯ ಗಮನಕ್ಕೆ ತಂದರು ಎಂದು ಅದನ್ನು ಬಳಸಿಕೊಂಡು ಭಾಷಣ ಮಾಡುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ : ಇಲ್ಲ ಭಾಷಣ ಮಾಡುತ್ತಿಲ್ಲ, ನಮ್ಮ ಕಷ್ಟ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ನಿಮಗೆ ನೋವಾಗಿದೆ ಎಂಬುದನ್ನು ನಾವು ನೋಡುತ್ತಿದ್ದೇವೆ.

ಅಧ್ಯಕ್ಷರು : ನನಗೇನೂ ನೋವಾಗಿಲ್ಲ, ನಿಯಮಾವಳಿ ಪ್ರಕಾರ ನಡೆಯುತ್ತಿಲ್ಲ ಎಂದು ಅಷ್ಟೆ.

SRI K.B. KOLIWAD : I seek a Point of Order...

ಅಧ್ಯಕ್ಷರು : ಇಲ್ಲಿಯೇ ಸಾಕಾದಷ್ಟು ಡಿಸಾರ್ಡರ್ ಇದೆ. ಈಗ ನಿಮ್ಮ ಪಾಯಿಂಟ್ ಆಫ್ ಆರ್ಡರ್ ಯಾರಿಗೆ ಬೇಕು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಕೋಳಿವಾಡ್ : ಈಗ ಜೀರೋ ಅವರ್ ಇಲ್ಲ ಎಂದು ಹೇಳುತ್ತೀರಿ. ಜೀರೋ ಅವರ್ ಬಗ್ಗೆ ವಿರೋಧ ಪಕ್ಷದವರು ಎತ್ತಿದಾಗ ಅದಕ್ಕೆ ತಾವು ಅವಕಾಶವನ್ನು ಕೊಡುತ್ತೀರಿ. ಆಡಳಿತ ಪಕ್ಷದವರು ಏನಾದರೂ ಹೇಳುವುದಕ್ಕೆ ಅವಕಾಶವೇ ಇರುವುದಿಲ್ಲ. ಈಗ ಜೀರೋ ಅವರ್ ಬೇಡ, 334 ನ್ನು ಮಾಡಬೇಕು ಎಂದು ತಾವು ನಿರ್ಣಯವನ್ನು ಮಾಡಿದ್ದೀರಿ..

(ಗೊಂದಲ)

ಅಧ್ಯಕ್ಷರು : ಆರ್ಡರ್ ಪ್ಲೀಸ್

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಪವರ್ ಸಪ್ಲೈ ವಿಚಾರದಲ್ಲಿ ರೈತರ ಪಂಪುಸೆಟ್ಟುಗಳು ಇರಬಹುದು, ಅಥವಾ ಮತ್ತೊಂದು ಇರಬಹುದು, ತೊಂದರೆ ಇದೆ ಎನ್ನತಕ್ಕಂಥ ಮಾತನ್ನು ಸರ್ಕಾರ ಗಮನಿಸಿದೆ. ಆ ವಿಚಾರ ನಮ್ಮ ಗಮನದಲ್ಲಿದೆ. ಇವತ್ತು ಪವರ್ ಷಾರ್ಟೇಜ್ ಇರುವುದರಿಂದ ಇವೆಲ್ಲಾ ಪ್ರಶ್ನೆ ಕೂಡ ಇರತಕ್ಕಂಥದ್ದು. ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ ಪಂಪುಸೆಟ್ಟುಗಳಿಗೆ ಹೆಚ್ಚಾಗಿ ನಾವು ಕನೆಕ್ಷನನ್ನು ಕೊಡಬೇಕು ಎಂದು ತಾವೇ ಹೇಳಿದ್ದೀರಿ. ನಾವು ಅದಕ್ಕೂ ಕೂಡ 90-91 ರಲ್ಲಿ ನಾವು ಜಾಸ್ತಿ ಮಾಡಿ ಈಗಾಗಲೇ ಪವರ್ ಕೊಡಿಸಿದ್ದೇವೆ. ಮಾನ್ಯ ಬೈರೇಗೌಡರು ತಾವೇ ಈ ಪ್ರಶ್ನೆಯನ್ನು ಪ್ರಸ್ತಾಪಮಾಡಿದ್ದೀರಿ, including your own district of Kolar. ಅದರಂತೆ ನಾವು ಕೂಡ ಜಾಸ್ತಿ ಮಾಡಿದ್ದೇವೆ. ಇದರಿಂದ

ಏನಾಗುತ್ತದೆ ಎಂದರೆ ಪವರ್ ಸಪ್ಲೈ ಜಾಸ್ತಿ ಬೇಕಾಗುತ್ತದೆ. ನಾವು ಈಗಾಗಲೇ ನೆರೆ ರಾಜ್ಯದವರೊಂದಿಗೆ ಸಂಪರ್ಕ ಮಾಡಿ ಹೆಚ್ಚಿನ ವಿದ್ಯುತ್ತನ್ನು ಪಡೆಯುವುದಕ್ಕೂ ಕೂಡ ನಾವು ವಿಚಾರ ಮಾಡುತ್ತಿದ್ದೇವೆ. ನಮ್ಮ ಪುಣ್ಯಕ್ಕೆ ಈ ಸಾರಿ ನಮ್ಮ ಹೈಡಲ್ ಪ್ರಾಜೆಕ್ಟ್ಸ್‌ಗಳು ಏನೇನು ಇವೆ, ಅವುಗಳೆಲ್ಲಾ ತುಂಬಿದೆ, ಎಕ್ಸ್‌ಪ್ಟ್ ಕಾಳಿ ಸೂಪರ್‌ಡ್ಯಾಂ ಮಾನ್ಯ ಬೈರೇಗೌಡರು ಈ ಕಡೆ ಗಮನವನ್ನು ಕೊಡಬೇಕು. ತಾವೇ ಈ ಪ್ರಶ್ನೆಯನ್ನು ಎತ್ತಿ ವಾಟಾಳರ ಕಡೆ ಮಾತನಾಡಿಕೊಂಡು ಕುಳಿತುಕೊಂಡರೆ ನಮ್ಮ ಗತಿ ಏನಾಗಬೇಕು?

ಅಧ್ಯಕ್ಷರು : ಇದು ಅವರಿಗೆ ಸಂಬಂಧಪಟ್ಟಿಲ್ಲ. ನಾರಾಯಣ್ ಅವರಿಗೆ ಸಂಬಂಧಪಟ್ಟಿರತಕ್ಕಂಥದ್ದು. ನಾರಾಯಣ್‌ರವರು ಕೇಳುತ್ತಿದ್ದಾರೆ, ನೀವು ಹೇಳಿ.

ಶ್ರೀ ಎಸ್. ಬಂಗಾರಪ್ಪ : ಇದು ಕೋಲಾರಕ್ಕೂ ಕೂಡ ಸಂಬಂಧಪಟ್ಟಿರತಕ್ಕಂಥದ್ದು. ಇದು ಎಲ್ಲರಿಗೂ ಕೂಡ ಸಂಬಂಧಪಟ್ಟಿರತಕ್ಕಂಥದ್ದು.

MR. SPEAKER : This was basically raised by Mr. Narayan.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ನಾರಾಯಣ್ ಅವರು ಎತ್ತಿರತಕ್ಕಂಥ ಪ್ರಶ್ನೆ ಇದು. ನಾವು ಅದಕ್ಕೆ ಏನು ಮಾಡಿದ್ದೇವೆ, ಎಕ್ಸ್‌ಪ್ಟ್ ಹೈ ಟೆನ್ಸನ್ ಯೂಸರ್ಸ್ ಯಾರು ಯಾರು ಇದ್ದಾರೆ, ಅವರ ಬಗ್ಗೆ ಈಗಾಗಲೇ ನಾವು ಹೇಳಿಕೆಯನ್ನು ಕೊಟ್ಟಿರುವುದು ಅದು ಪತ್ರಿಕೆಯಲ್ಲೂ ಕೂಡ ಬಂದಿದೆ. ಹೆಚ್ಚಾಗಿ ಪಂಪುಸೆಟ್ಟುಗಳಿಗೆ ಡೈವರ್ಟ್ ಮಾಡತಕ್ಕಂಥ ತೀರ್ಮಾನವನ್ನು ಸರ್ಕಾರದವರು ಈಗಾಗಲೇ ಮಾಡಿದ್ದೇವೆ. ತೊಂದರೆ ಇದೆ ಎನ್ನತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ. ಎಲೆಕ್ಟ್ರಿಸಿಟಿ ಬೋರ್ಡ್ ಛೇರ್ಮನ್ ಅವರನ್ನು ಕರೆಯಿಸಿ ನಾವು ಹೇಳಿದ್ದೇವೆ. ಅವರೂ ಕೂಡ ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿದ್ದಾರೆ. ಈ ಮಧ್ಯೆ ಈ ಸದನದ ಮುಂದೆ ಬೇಡಿಕೆಯ ಮೇಲೆ ಚರ್ಚೆ ಅರ್ಬನ್ ಡೆವಲಪ್‌ಮೆಂಟ್ ಅದು ಬರುತ್ತದೆ. ಆಗ ವಿವರವಾಗಿರತಕ್ಕಂಥ ಹೇಳಿಕೆಯನ್ನು ಸರ್ಕಾರದ ಪರವಾಗಿ ನಾವು ನೀಡುತ್ತೇವೆ. ಈ ಮಧ್ಯೆ ಹೇಳಿಕೆ ಬರುವುದು ಲೇಟ್ ಆಗಬಹುದು ಎನ್ನತಕ್ಕಂಥದ್ದು ತಮ್ಮ ಮನಸ್ಸಿನಲ್ಲಿರಬಹುದು. ನಾವು ಇವತ್ತೇ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ಹೇಳುತ್ತೇವೆ, ಪವರ್ ಸಪ್ಲೈಯನ್ನು ಆದಷ್ಟು ಶೀಘ್ರವಾಗಿ ಶಕ್ತಿಮೀರಿ ಸರಿಪಡಿಸಬೇಕು. ಆದರೂ ಸ್ವಲ್ಪ ತೊಂದರೆ ಉಳಿಯಬಹುದು ಎನ್ನತಕ್ಕಂಥದ್ದು ನನ್ನ ಭಾವನೆ because of the larger number of IP Sets. ತುಮಕೂರು ಜಿಲ್ಲೆ, ಕೋಲಾರ ಜಿಲ್ಲೆಗಳನ್ನು ಗಮನದಲ್ಲಿಟ್ಟುಕೊಂಡಿದರೂ ಬೆಂಗಳೂರು ರೂರಲ್ ಕೂಡ ಇದೆ, ಅಲ್ಲಿ ಕುಡಿಯುವ ನೀರಿನ ಪ್ರಶ್ನೆಯೂ ಇದೆ, ಎಲ್ಲಾ ಕಡೆಯಲ್ಲಿಯೂ ಅದು ಇದೆ. I am not saying that there are no problems at all in Bidar district. ಬೀದರ್ ಡಿಸ್ಟ್ರಿಕ್ಟ್ ಮತ್ತು ಬೇರೆ ಬೇರೆ ಜಿಲ್ಲೆಗೂ ಕೂಡ ಈ ಪ್ರಶ್ನೆ ಬಂದೇ ಬರುತ್ತದೆ.

ಇವುಗಳನ್ನೆಲ್ಲಾ ಒಳಗೊಂಡಂತೆ ನಾವು ವಿವರವಾದ ಹೇಳಿಕೆಯನ್ನು ಕೂಡ ಕೊಡುತ್ತೇವೆ. ಮೈಸೂರಿನದೂ ಕೂಡ ಇದೆ. ಮಾನ್ಯ ವೆಂಕಟೇಶ್‌ರವರು ಆಗಲೇ ಎದ್ದು ಕೇಳುವುದಕ್ಕೆ ಹೊರಟಿದ್ದಾರೆ. ಇವೆಲ್ಲವುಗಳಿಗೂ ವಿವರವಾದ ಹೇಳಿಕೆಯನ್ನು ಕೊಡುತ್ತೇವೆ. ಮಾನ್ಯ ಸದಸ್ಯರಾದ ನಾರಾಯಣ್‌ರವರಿಗೆ ನಾನು ಅಧ್ಯಕ್ಷರ ಮುಖೇನ ತಿಳಿಸತಕ್ಕಂಥದ್ದು ಇವತ್ತೇ ಇದಕ್ಕೆ ಹೆಚ್ಚಿನ ಗಮನವನ್ನು ಕೊಟ್ಟು ಈ ಬಗ್ಗೆ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ.

ಶ್ರೀ ಆರ್. ನಾರಾಯಣ್ : ಕೆ.ಇ.ಬಿ.ಗೆ ಇವತ್ತು ಐದು ಸಾವಿರ ಜನ ಮುತ್ತಿಗೆ ಹಾಕಿದ್ದಾರೆ. ಅವರಿಗೆ ಕರೆಂಟನ್ನು ಮೂರು ಗಂಟೆ ಕಾಲ ಕೊಡಿ, ಪರವಾಗಿಲ್ಲ, ಅವರಿಗೂ ಕೂಡ ಕಷ್ಟಸುಖ ಎಲ್ಲಾ ಗೊತ್ತಿದೆ. ಪವರ್ ಇಲ್ಲ, ಷಾರ್ಟೇಜ್ ಇದೆ ಎನ್ನುವುದು ಅಜನರಿಗೂ ಗೊತ್ತಿದೆ. ನಾಲ್ಕು ಗಂಟೆಯೋ ಕನಿಷ್ಟ ಪಕ್ಷ ಎರಡೂ ಗಂಟೆಗಾದರೂ ಕೊಡಿ. ಖಚಿತವಾಗಿ ಇಂಥ ಟೈಮ್‌ನಲ್ಲಿ ಕೊಡುತ್ತೇವೆ. ಎನ್ನತಕ್ಕಂಥ ಒಂದು ವ್ಯವಸ್ಥೆ ಇವತ್ತು ಆಗಬೇಕು. ರಾತ್ರಿ 12 ರಿಂದ 2 ಗಂಟೆಯವರೆಗೂ ಕೊಡಿ, ಅವರು ಅದನ್ನು ಪಡೆಯುವುದಕ್ಕೆ ರೆಡಿಯಾಗಿದ್ದಾರೆ. ತೊಂದರೆ ಇದೆ ಎನ್ನುವುದನ್ನು ಆ ಜನರು ಒಪ್ಪುತ್ತಾರೆ. ಇಂಥ ಖಚಿತವಾದ ಟೈಮ್‌ನಲ್ಲಿ ಪವರ್ ಕೊಡುತ್ತೇವೆ ಎನ್ನುವುದನ್ನು ನೀವು ಸಂಬಂಧಪಟ್ಟವರಿಗೆ ಕೊಟ್ಟು ಅವರು ಸೂಕ್ತವಾಗಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಬಗ್ಗೆ ನಮಗೆ ಸರ್ಕಾರದಿಂದ ಭರವಸೆಯನ್ನು ಕೊಡಬೇಕು. ಎರಡು-ಮೂರು ಗಂಟೆಗಳ ಕಾಲ ಪವರ್ ಕೊಟ್ಟರೂ ನಮಗೆ ಸಾಕು. ನೀವು ಯಾವ ಟೈಮ್ ಎಂದು ಹೇಳುತ್ತೀರೋ ಆ ಟೈಮ್‌ನಲ್ಲಿ ನಮಗೆ ಕೊಡಬೇಕು. You must ensure that they must take it very seriously. ನೋಡುತ್ತೇವೆ, ಮಾಡುತ್ತೇವೆ ಎನ್ನುವುದನ್ನೆಲ್ಲಾ ಕೇಳಿ ಕೇಳಿ ಆ ಜನಗಳಿಗೆ ಬೇಜಾರಾಗಿದೆ. ಮೂರು ಗಂಟೆಯೋ ಕನಿಷ್ಟ ಪಕ್ಷ ಎರಡು ಗಂಟೆಯೋ ಕೊಡಿ. ಈ ರೀತಿ ಭರವಸೆ ನಮಗೆ ಸರ್ಕಾರದಿಂದ ಬರಬೇಕು.

ಅಧ್ಯಕ್ಷರು : ನೀವು ಸ್ವಲ್ಪ ನಿಧಾನವಾಗಿ ಮಾತನಾಡಿದರೆ ಅವರು ಅರ್ಥ ಮಾಡಿಕೊಳ್ಳಬಹುದು. ನೀವು ಒಂದೇ ಸಮನೆ ಮಾತನಾಡಿದರೆ ಹೇಗೆ? ಮಾನ್ಯ ನಾರಾಯಣರವರು ಹೇಳಿದ್ದನ್ನು ಮಾನ್ಯ ಶಫಿರವರೆ ನೀವು ಟ್ರಾನ್ಸ್‌ಲೇಟ್ ಮಾಡಿ.

ಶ್ರೀ ಶಫಿ ಅಹಮದ್ : ತುಮಕೂರು ಜಿಲ್ಲೆಯಲ್ಲಿ ಕೆ.ಇ.ಬಿ. ಆಫೀಸಿನ ಮುಂದೆ 5 ಸಾವಿರ ಜನ ರೈತರು ಮುತ್ತಿಗೆ ಹಾಕಿದ್ದಾರೆ. ಈಗ ತಾನೆ ಅವರು ಕಾಗದವನ್ನು ಬರೆದು ಟೆಲೆಕ್ಸ್ ಮೆಸೆಜ್ ಅನ್ನು ಕೂಡ ಕಳುಹಿಸಿಕೊಟ್ಟಿದ್ದಾರೆ. ಮಾನ್ಯ ಸಚಿವರು ಒಂದು ಸಮಾಧಾನಕರವಾದ ಉತ್ತರವನ್ನು ಹೇಳಿದರೆ ಎದ್ದೇಳುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಿದ್ದಾರೆ. ಹಾಗೆಯೇ ಸ್ಟ್ರೈಕ್ ಮಾಡಿಕೊಂಡು ಕುಳಿತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಅದರ ಬಗ್ಗೆ ಭರವಸೆಯನ್ನು ಕೊಟ್ಟು ಯಾವರೀತಿ ಬಗೆಹರಿಸುತ್ತಾರೆ ಎಂಬುದನ್ನು ತಿಳಿಸಬೇಕು. ತುಮಕೂರಿನಲ್ಲಿ ಕಳೆದ 15 ದಿವಸಗಳಿಂದಲೂ ಪವರ್ ಇಲ್ಲ, 24 ಗಂಟೆಯಲ್ಲಿ ಬರೀ 6 ಗಂಟೆಯೂ ಸಹ ಪವರ್ ಸಿಕ್ಕುತ್ತಿಲ್ಲ. ಆದ್ದರಿಂದ ರೈತರೆಲ್ಲ ಮುತ್ತಿಗೆ ಹಾಕಿದ್ದಾರೆ. ಆದ್ದರಿಂದ ಸನ್ಮಾನ್ಯ ಸಚಿವರು ಸಮಾಧಾನಕರವಾದ ಉತ್ತರವನ್ನು ಹೇಳಿದರೆ ಸೂಕ್ತವಾಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ಇವರೂ ಕೂಡ ಇದೇ ವೇಗದಲ್ಲಿ ಹೇಳುತ್ತಿದ್ದಾರೆ.

ಶ್ರೀ ಆರ್. ನಾರಾಯಣ್ : ಒಂದು ಕಡೆ ಪವರ್ ಇಲ್ಲ, ಇನ್ನೊಂದು ಕಡೆ ವೋಲ್ಟೇಜ್ ಇಲ್ಲ, ಇದು ತಮಗೆ ಚೆನ್ನಾಗಿ ಗೊತ್ತಿದೆ. ನಮ್ಮಲ್ಲಿ ತೋಟಗಾರಿಕೆ ಬೆಳೆ ಇರುವ ಜನರು ಜಾಸ್ತಿ ಇದ್ದಾರೆ. ಈಗಾಗಲೇ ಅಡಿಕೆ ಬೆಳೆಯನ್ನು ಕಳೆದುಕೊಂಡಿದ್ದಾರೆ. ತೆಂಗಿನ ಬೆಳೆಯನ್ನು ಕಳೆದುಕೊಳ್ಳುವುದರೊಳಗೆ ಇದನ್ನು ಸರಿಮಾಡುತ್ತೀರಾ? ಹೇಗೆ ಹೇಳಿ.

ಶ್ರೀ ಎಸ್. ಬಂಗಾರಪ್ಪ : ಈ ವಿಚಾರದ ಬಗ್ಗೆ ಚರ್ಚೆಮಾಡಲು, ಅರ್ಬನ್ ಡೆವಲಪ್‌ಮೆಂಟ್ ಬೇಡಿಕೆ ಚರ್ಚೆ ಆದ ತಕ್ಷಣ ಈ ಇಲಾಖೆಯ ಬೇಡಿಕೆ ಮೇಲೆ

ಚರ್ಚೆ ಬರುತ್ತಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ವೋಲ್ಟೇಜ್ ಪ್ರಶ್ನೆ ಬಂದಾಗ ಏನು ಮಾಡಬೇಕೆಂಬುದಕ್ಕೆ ಅಲ್ಲಲ್ಲಿ ಕೆ.ಇ.ಬಿ. ಲೈನ್..

(ಗೊಂದಲ)

ಶ್ರೀ ಆರ್. ನಾರಾಯಣ್ : ಕೆ.ಇ.ಬಿ. ಯವರು ಐ.ಪಿ.ಸೆಟ್ಟುಗಳಿಗೆ ಕೊಡಿ ಎಂದು ತಾವು ಇನ್ಸ್‌ಟ್ರಕ್ಷನ್ ಕೊಟ್ಟರೆ ನಾವು ಇರಬಹುದು. ಮಾಡಲೇ ಬೇಡಿ ಎಂದು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಶ್ರೀ ಶಫಿ ಅಹಮದ್ : ಅಡಿಕೆ ತೋಟವು ಒಂದು ಉಳಿದಿಲ್ಲ. ತೆಂಗಿನ ತೋಟವನ್ನಾದರೂ ಉಳಿಸಿ.

ಶ್ರೀ ಎಸ್. ಬಂಗಾರಪ್ಪ : ನಮಗೆ ಗೊತ್ತಿರುವ ಹಾಗೆ ತುಮಕೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆ ಬಿದ್ದಿಲ್ಲ. ಬಿತ್ತನೆ ಆಗದೆ ಇರತಕ್ಕ ಕೆಲವು ಭಾಗ ಉಳಿದಿದ್ದರೆ ಅದು ನಮ್ಮ ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆ. ಅಲ್ಲಿ ತೊಂದರೆ ಇದೆ. ಬಿತ್ತನೆ ಆಗಿರತಕ್ಕ ಬೆಳೆಗಳು ಕೂಡ ಹೋಗುತ್ತಿವೆ ಎಂದು ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ. ಈ ಮಧ್ಯೆ ನೀರಿನ ಬಾವಿ ಇರಬಹುದು. ಇರತಕ್ಕ ಐ.ಪಿ. ಸೆಟ್ಟುಗಳು ಇರಬಹುದು. ಈಗಾಗಲೇ ಆ ಜಲಮಟ್ಟ ವಾಟರ್ ಟೇಬಲ್ ಏನಿದೆ ಅದು ಮತ್ತೆ ಕೆಳಗಡೆ ಹೊರಟು ಹೋಗುತ್ತಿದೆ. ಪರ್ಟಿಕ್ಯುಲರ್ಲಿ ಆ ಏರಿಯಾ ಮತ್ತು ಕೋಲಾರ.

ಶ್ರೀ ವಾಟಾಳ್ ನಾಗರಾಜ್ : ಪ್ರತಿಯೊಂದು ಹೋಗಿದೆ. ನಿಜ, ಒಪ್ಪಿಕೊಳ್ಳುತ್ತೇವೆ. ಇದಕ್ಕೆ ಪರಿಹಾರವೇ ಇಲ್ಲವಲ್ಲಾ?

ಶ್ರೀ ಎಸ್. ಬಂಗಾರಪ್ಪ : ಪರಿಹಾರ ಏನು ಗೊತ್ತೇ? ಅರ್ಜುನ ಬಾಣ ಹೊಡೆಯಬೇಕು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ : ಯಾವ ಬಾಣ.

ಶ್ರೀ ಎಸ್. ಬಂಗಾರಪ್ಪ : ಅಲ್ಲಿ ಅರ್ಜುನನಬಾಣವನ್ನು ಹೊಡೆದು ನೀರು ತರಬೇಕು.

ಶ್ರೀ ವಾಟಾಳ್ ನಾಗರಾಜ್ : ಯಾವುದೊ ಒಂದು ಬಾಣವನ್ನು ಬಿಡಿ, ವಿದ್ಯುಚ್ಛಕ್ತಿ ಸಚಿವರು ಅವರಿಗೆ ಪ್ಲಗ್ ಇಲ್ಲ, ಎಲ್ಲಾ ಕಡೆ ಓಡಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ನೀರಿನ ಬಗ್ಗೆ ಯೋಚನೆಯನ್ನು ಇಟ್ಟುಕೊಂಡೇ ಅವರು ನನ್ನ ಹತ್ತಿರ ಬಂದು ಮಾತನಾಡಿದರು.

ಶ್ರೀ ವಾಟಾಳ್ ನಾಗರಾಜ್ : ಅವರ ಬಗ್ಗೆ ನಮಗೆ ಅನುಕಂಪ ಮತ್ತು ಕರುಣೆ ಎರಡು ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ ; ಅವರನ್ನು ಅರ್ಥಮಾಡಿಕೊಂಡಿದ್ದೀರಿ ಎಂಬ ದೃಷ್ಟಿಯಿಂದ ತಮಗೆ ವಂದನೆಗಳು.

ಶ್ರೀ ಬಾಬಗೌಡ ರುದ್ರಗೌಡ ಪಾಟೀಲ್ : ಅರ್ಜುನನ ಬಾಣ ಬಿಡಬೇಕು ಅಂದರೆ ಶೇಕಡ 10 ರಷ್ಟು ಹೈಪವರ್ ಟೆನ್‌ಶನ್ ಕಟ್ ಮಾಡಿದರೆ 3.5 ಕೋಟಿ ಜನರಿಗೆ ಎಲೆಕ್ಟ್ರಿಸಿಟಿ ಸಿಗುತ್ತದೆಂದು ನಮ್ಮ ಭಾವನೆಯಾಗಿದೆ. ಬೇಕಾದರೆ ತಾವು ಅಂಕೆಸಂಖ್ಯೆಯನ್ನು ತರಿಸಿ ನೋಡಬಹುದು. ನಿಮಗೆ ಧೈರ್ಯ ಇದ್ದರೆ ಹೈಟೆನ್‌ಷನ್ ಕಟ್ ಮಾಡಿ ರೈತರಿಗೆ ವಿದ್ಯುಚ್ಛಕ್ತಿ ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ನಮ್ಮ ಸ್ನೇಹಿತರಾದಂತಹ ಬಾಬಾಗೌಡ ಪಾಟೀಲರ ಗಮನಕ್ಕೆ ಬಂದಿರಬಹುದು. ನಮ್ಮ ಹೈಡ್ರೊ ಪ್ರಾಜೆಕ್ಟ್ ತುಂಬಿವೆ. ಎಂದು ನಾನು ಈಗಾಗಲೇ ಹೇಳಿದ್ದೇನೆ. ಕಾಳೀ ಪ್ರಾಜೆಕ್ಟ್‌ಗೆ ಸುಮಾರು 20 ಅಡಿ ನೀರು ಇನ್ನು ತುಂಬಾಬೇಕಾಗಿದೆ. ಶರಾವತಿ ಪ್ರಾಜೆಕ್ಟ್ ಸಂಪೂರ್ಣ ತುಂಬಿದೆ. ನೀರನ್ನು ನಾವು ಗೇಟಿನ ಹೊರಗಡೆ ಬಿಟ್ಟಿದ್ದೇವೆ. ಹೈಟೆನ್‌ಷನ್ ಯೂಸರ್ಸ್‌ನಿಂದ ಪವರ್ ಡೈವರ್ಟ್ ಮಾಡಿ ತಮಗೆ ಕೊಟ್ಟಿದ್ದೇವೆ. ಅದನ್ನು ನಿಲ್ಲಿಸಿದ್ದೇವೆ. ಈಗಾಗಲೇ ಸ್ಕೀಮ್ ಅನ್ನು ನಾವು ಅನೌನ್ಸ್ ಮಾಡಿದ್ದೇವೆ. ಬೇಡಿಕೆ ಮೇಲೆ ಚರ್ಚೆಗೆ ಬಂದಾಗ ಅದರ ಬಗ್ಗೆ ವಿವರ ಕೊಡುತ್ತೇವೆ. ಬೇಡಿಕೆ ಮೇಲೆ ಚರ್ಚೆಗೆ ಬಂದಾಗ ಹೇಳೋಣ. ಏಕೆಂದರೆ ಅದು ಪಾಲಿಸಿ ಮ್ಯಾಟರ್ ಆಗುತ್ತದೆ. ಅದರ ಬಗ್ಗೆ ನಾವು ಮಾಡೋಣ. ಮಾನ್ಯ ನಾರಾಯಣ್‌ರವರು ಮತ್ತು ಶಫಿರವರು ಹೇಳಿರತಕ್ಕದ್ದನ್ನು ಗಮನದಲ್ಲಿಟ್ಟುಕೊಂಡು ಮತ್ತೊಂದು ಸಾರಿ ನಾವು ಕೆ.ಇ.ಬಿ.ಮುಖಾಂತರ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು ಅದನ್ನು ನಾವು ಹಾಕಿಕೊಳ್ಳುತ್ತೇವೆ.

ಗಮನಸೆಳೆಯುವ ಸೂಚನೆ

ವಿಷಯ : ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತರು ಮುಷ್ಕರ ನಡೆಸುತ್ತಿರುವುದು.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತರು ಮುಷ್ಕರ ನಡೆಸುತ್ತಿರುವುದನ್ನು ಕುರಿತು ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಹಾಲಿ 106 ಬಾಲವಿಕಾಸ ಯೋಜನೆಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. ಈ ಬಾಲ ವಿಕಾಸ ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಭಾರತ ಸರ್ಕಾರದ ಮಾರ್ಗಸೂಚಿಯಂತೆ ಗೌರವ ಸೇವೆಗೆ ಗೌರವಧನ ಕೊಡಲಾಗುತ್ತಿದೆ. ಅಂಗನವಾಡಿ ಕಾರ್ಯಕರ್ತೆಯರ ಸಂಘವು ಕೆಲವು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು ದಿನಾಂಕ:20-8-91ರಿಂದ ಮುಷ್ಕರಕ್ಕೆ ಕರೆ ನೀಡಿದೆ. ಇದರ ಬಗ್ಗೆ ಸಂಘದ ಪದಾಧಿಕಾರಿಗಳೊಂದಿಗೆ ಚರ್ಚಿಸಿದೆ. ನಂತರ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿಯವರ ಮನವಿಯ ಮೇರೆಗೆ ಮುಖ್ಯ ಮಂತ್ರಿಯವರು ದಿನಾಂಕ : 7-9-91ರಂದು ಸಭೆಯನ್ನು ಕರೆದು ಅವರ ಬೇಡಿಕೆಗಳ ಬಗ್ಗೆ ಸದರಿ ಸಂಘದ ಪದಾಧಿಕಾರಿಗಳು ಮುಷ್ಕರವನ್ನು ತಕ್ಷಣ ಹಿಂತೆಗೆದುಕೊಂಡು ಕೆಲಸಕ್ಕೆ ಹಾಜರಾಗಲು ಒಪ್ಪಿದರು.

ಕಾರ್ಯಕರ್ತೆಯರ ಸೇವಾ ವಿಷಯ, ವೇತನ ಹೆಚ್ಚಳ ಬೇಡಿಕೆಯಲ್ಲಿ ಸೇರಿವೆ. ಈ ಬೇಡಿಕೆಗಳನ್ನು ಭಾರತ ಸರ್ಕಾರವೇ ತೀರ್ಮಾನಿಸಬೇಕಾಗಿದೆ. ಸರ್ಕಾರವು ಅಂಗನವಾಡಿ ಕಾರ್ಯಕರ್ತೆಯರ ವೇತನ ಹೆಚ್ಚಿಸಬೇಕೆಂದು ಕೋರಿ ಭಾರತ ಸರ್ಕಾರಕ್ಕೆ ಈಗಾಗಲೇ ಪತ್ರ ಬರೆಯಲಾಗಿದೆ. ಬಾಲವಿಕಾಸ ಯೋಜನೆಯು ಭಾರತ ಸರ್ಕಾರದ ಸಹಾಯಧನ ಮತ್ತು ಅವರ ಮಾರ್ಗಸೂಚಿಯ ಪ್ರಕಾರ ನಡೆಯುತ್ತಿರುವುದರಿಂದ ಸೇವಾ ವಿಷಯ ಮತ್ತು ವೇತನ ಹೆಚ್ಚಳದ ಬಗ್ಗೆ ಕೇಂದ್ರ ಸರ್ಕಾರವೇ ನಿರ್ಣಯ ತೆಗೆದುಕೊಳ್ಳಬೇಕಾಗಿದೆ.

ಶ್ರೀಮತಿ ರೇಣುಕಾ ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಕೌನ್ಸಿಲ್‌ನಲ್ಲಿ ಕೊಟ್ಟಿರುವಂಥ ಹೇಳಿಕೆಯನ್ನೇ ಇಲ್ಲೂ ಕೊಟ್ಟಿದ್ದಾರೆ. ಯಾವುದೇ ವ್ಯತ್ಯಾಸ